ನಾನ್-ಗೌರ್ನಮೆಂಟಲ್ ಆರ್ಗನೈಜೇಷನ್ ಮತ್ತು ನೀರು ಬಳಕೆದಾರರ ಸಂಘಗಳು ಆಗಬೇಕೆಂದು ಮಾನ್ಯ ಸಚಿವರೇನು ಹೇಳಿದ್ದಾರೆ ಆ ಸಂಘಗಳನ್ನು ಬಹಳ ಬೇಗ ರಚಿಸಿ, ಅದರ ಮೂಲಕ ಮಾಡಬೇಕಾಗಿದೆ ಈ ಸರ್ಕಾರ ಯಾವುದರಲ್ಲಿ ನಂಬಿಕೆ ಇಟ್ಟಿದೆ ಎಂದರೆ, ಪಬ್ಲಿಕ್ ಮತ್ತು ಪ್ರೈವೇಟ್ ಪಾರ್ಟಿಸಿಪೇಷನ್ ಗ್ರಾಮಸ್ಥರ ಪಾರ್ಟಿಸಿಪೇಷನ್ ಇಲ್ಲವಿದ್ದರೆ ಯಾವ ಕೆಲಸವೂ ಆಗುವುದಿಲ್ಲ ಆ ಪಾರ್ಟಿಸಿಪೇಟರಿ ಅಪ್ರೋಚ್‌ಗೆ ಈ ಸರ್ಕಾರ ಬದ್ಧವಾಗಿದ ಆ ದಿಕ್ಕಿನಲ್ಲಿ ನಾವು ಕೆಲಸವನ್ನು ಸಾಧಿಸುತ್ತಿದ್ದೇವೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಮೇಲಿನ ಲೀಟರ್ ಫೀಯನ್ನು ರದ್ದು ಗೊಳಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ , 9(45)

ಸದಸ್ಯರ ಹೆಸರು ಶ್ರೀ ಅಭಯಚಂದ್ರ ಕೆ(ಮೂಡಬಿದ್ರೆ)

ಉತ್ತರಿಸುವ ಸಚಿವರು ಶ್ರೀ ಎಂ ಎಂ ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ ದಕ್ಷಿಣ ಕನ್ನಡದಲ್ಲಿ ಎಷ್ಟು ಮೂರ್ತೆದಾರರ ಸಹಕಾರ ಸಂಘಗಳಿವೆ ಸೇಂದಿ ಮೇಲಿನ ಲೀಟರ್ ಫೀ ಬಾಕಿ ಇದೆ ಎಂದು ಈ ಸೊಸೈಟಿಗಳಿಗೆ ಸೇಂದಿ ಅಂಗಡಿಗಳ ಲೈಸೆನ್ಸ್ ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಾಕಿ ಇರುವ ಲೀಟರ್ ಫೀಯನ್ನು ಹಿಂದಿನ ಸರ್ಕಾರ ರದ್ದುಪಡಿಸಿರುವುದು ನಿಜವೇ?

ಇ ಇಲ್ಲದಿದ್ದಲ್ಲಿ ಈ ಲೀಟರ್ ಫೀಯನ್ನು ರದ್ದುಗೊಳಿಸಲಾಗುವುದೇ?

ಈ ಹಾಗಿದ್ದಲ್ಲಿ ಇದನ್ನು ಎಂದಿನಿಂದ ಜಾರಿಗೊಳಿಸಲಾಗುವುದು?

ಉತ್ತರ

ಅ ದಕ್ಷಿಣ ಕನ್ನಡದಲ್ಲಿ 36 ನೋಂದಾಯಿತ ಮೂರ್ತೇದಾರರ ಸಹಕಾರಿ ಸಂಘಗಳಿರುತ್ತದೆ

ಹೌದು

ಆ ಇಲ್ಲ

ಇ ಈ ಬಗ್ಗೆ ಪ್ರಸ್ತಾಪನೆ ಸರ್ಕಾರದ ಪರಿಶೀಲನೆಯಲ್ಲಿದೆ

ಈ. ಆದಷ್ಟು ಜಾಗ್ರತೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು

ಶ್ರೀ ಕೆ ಅಭಯಚಂದ್ರ ಎರಡೂವರೆ ವರ್ಷಗಳಾದರೂ ಕೂಡ ಲೀಟರ್ ಫೀ ಅನ್ನು ಮನ್ನಾ ಮಾಡಿಲ್ಲ ಅದನ್ನು ಆದಷ್ಟು ಬೇಗ ಮನ್ನಾ ಮಾಡಬೇಕೆಂದು ಕೇಳುತ್ತೇನೆ

ಶ್ರೀ ವಸಂತ ವಿ ಸಾಲಿಯಾನ 1992ರಲ್ಲಿ ಮಾನ್ಯ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಮೂರ್ತೆದಾರರಿಗೆ ಸೇಂದಿ ಕೊಡಲು ಅವಕಾಶ ಮಾಡಿಕೊಟ್ಟರು 1994ರಲ್ಲಿ ಮಾನ್ಯ ಶ್ರೀ ಎಂ ವೀರಪ್ಪಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ಒಂದು ರೂಪಾಯಿ ಲೀಟರ್ ಫೀ ಮನ್ನಾ ಮಾಡಿದರು ನಂತರ, 56 ಸೊಸೈಟಿಗಳ 44 ಲಕ್ಷ ರೂಪಾಯಿಗಳ ಬಾಕಿ ಏನಿದೆ ಅದನ್ನು ಇವತ್ತಿನವರೆಗೆ ಮನ್ನಾ ಮಾಡಲಿಕ್ಕಾಗಲಿಲ್ಲ ಹಿಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ ಹೆಚ್ ಪಟೇಲ್‌ರವರು ಒಹಿರಂಗ ಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದರು ಈಗಿನ ಮುಖ್ಯ ಮಂತ್ರಿಗಳಿಗೆ ನಾವು ಎರಡೂ ಜಿಲ್ಲೆಗಳ ಶಾಸಕರು ಇದರ ಬಗ್ಗೆ ಮನವಿ ಕೊಟ್ಟಿದ್ದೇವೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕೂಡಲೇ ಪರಿಶೀಲಿಸಿ, ಲೀಟರ್ ಫೀ ಅನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ

ಶ್ರೀ ಡಿ ವಿ ಸದಾನಂದಗೌಡ ಇದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸಾವಿರಾರು ಕುಟುಂಬಗಳ ಬವಣೆಯ ಮಾತು ಕೋ-ಆಪರೇಟಿವ್ ಸೊಸೈಟಿಗಳನ್ನು ಫಾರ್ಮ್ ಮಾಡುವ ಸಂದರ್ಭಗಳಲ್ಲಿ ಆಗಿನ ಸರ್ಕಾರ, ನಿಮಗೆ ಲೀಟರ್ ಫೀ ಮನ್ನಾ ಮಾಡುತ್ತೇವೆ, ಲೀಟರ್ ಫೀ ಮನ್ನಾ ಮಾಡುವ ಮೂಲಕ ಅವರಿಗೆ ಸೌಲಭ್ಯಗಳನ್ನು ಸೊಸೈಟಿಗಳ ಮೂಲಕ ಕೊಡಿಸುವಂಥಾದ್ದು ಮಾಡುತ್ತೇವೆಂದು ಮಾತು ಕೊಟ್ಟಿತ್ತು ಲೀಟರ್ ಫೀ ವಸೂಲಿಯಿಂದ ಇವತ್ತು ಹಲವಾರು ಸಹಕಾರ ಸಂಘಗಳು ಮುಚ್ಚಿವೆ ಈಗಿರುವುದು ಕೇವಲ 36 ಮೂರ್ತೆದಾರರ ಸಹಕಾರ ಸಂಘಗಳು ಆಗ ನೂರಾರು ಸಹಕಾರ ಸಂಘಗಳು ನೋಂದಣಿಯಾಗಿದ್ದವು ಒಂದು ಸಂದರ್ಭದಲ್ಲಿ ಹೇಗಿತ್ತೆಂದರೆ ಯಾರು ಮೂರ್ತೆ ಮಾಡುತ್ತಾನೆ, ಅವನೇ ಮಾರುವವನೂ ಆಗಬೇಕೆಂದು ಹೇಳುವ ಧೋರಣೆ ಸರ್ಕಾರದ ವತಿಯಿಂದ ಇತ್ತು ಕನಿಷ್ಟ ಲೀಟರ್ ಫೀ ಮನ್ನಾ ಮಾಡಿದರೆ, ನೂರಾರು ಕುಟುಂಬಗಳಿಗೆ ಒಳ್ಳೆಯದಾಗುತ್ತದೆ ಸರ್ಕಾರ ಇದನ್ನು ಖಂಡಿತವಾಗಿಯೂ ಮಾಡಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಲೀಟರ್ ಫೀ ಮನ್ನಾ ಮಾಡಿ, ಅದನ್ನು ಜಾರಿ

ಮಾಡುವವರೆಗೆ ಸದ್ಯಕ್ಕೆ ಲೈಸೆನ್ಸ್ ಕ್ಯಾನ್ಸಲ್ ಮಾಡದೆ, ಅವರಿಗೆ ಪರ್ಮಿಷನ್ ಕೊಡುತ್ತೀರಾ?

ಶ್ರೀ ಯು ಆರ್ ಸಭಾಪತಿ ಈ ಹಿಂದೆ ಸೇಂದಿ ಮಾರಾಟ ನಿಷೇಧ ಮಾಡಿದಾಗ ಈ ನಿಷೇಧವನ್ನು ವಿರೋಧಿಸಿ ನಾವು ಚಳುವಳಿ ಮಾಡಿದೆವು ಈಗಾಗಲೇ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಸೇಂದಿ ಮಾರಾಟ ಮಾಡಬಹುದೆಂದು ತೀರ್ಮಾನಿಸಿ ಲೀಟರ್ ಫೀ ಅನ್ನು ಮನ್ನಾ ಮಾಡುವ ಕಾಯ್ದೆಯನ್ನು ಜಾರಿಗೆ ತರಲಾಗಿದೆ ಈ ಸಂದರ್ಭದಲ್ಲಿ 44 ಲಕ್ಷ ರೂಪಾಯಿಗಳ ಬಾಕಿ ಇದೆ ಎಂದು ಹೇಳಿಕೊಂಡು, ಅಬಕಾರಿ ಇಲಾಖೆಯವರು ನಿತ್ಯ ಸೇಂದಿ ಮಾರಾಟಗಾರರಿಗೆ ಮತ್ತು ಸಹಕಾರ ಸಂಘಗಳಿಗೆ ಕಿರುಕುಳ ಕೊಡುತ್ತಿದ್ದಾರೆ ಆ ಮೂಲಕ ಸಹಕಾರ ಸಂಘಗಳು ವರಮಾನಕ್ಕೆ ನವೀಕರಣ ಮಾಡಲೂ ಬಿಡುತ್ತಿಲ್ಲ ಅದಕ್ಕೋಸ್ಕರ ಕಳೆದ 3 ವರ್ಷಗಳಿಂದಲೂ ಪರಿಶೀಲಿಸಿ ತೀರ್ಮಾನ ಮಾಡುತ್ತೇವೆಂದು ಸರ್ಕಾರದಿಂದ ಉತ್ತರ ಬರುತ್ತಿದೆ ಆದರೆ, ಅಧಿಕಾರಿಗಳು ಮಾತ್ರ ಕಿರುಕುಳ ಕೊಡುವುದು ತಪ್ಪಲಿಲ್ಲ ವರಮಾನಕ್ಕೆ ನವೀಕರಣ ಮಾಡುವತನಕ ಆ ಸಹಕಾರ ಸಂಘಗಳಿಗೆ ಯಾವುದೇ ರೀತಿಯಾಗಿ ಅಬಕಾರಿ ಇಲಾಖೆಯಿಂದ ಕಿರುಕುಳ ಆಗದಂತೆ ಸರ್ಕಾರ ನೋಡಬೇಕು

ಶ್ರೀ ಹೆಚ್ ಗೋಪಾಲ್ ಭಂಡಾರಿ ನಮ್ಮ ಜಿಲ್ಲೆಯಲ್ಲಿ ಸುಮಾರು ಎರಡೂವರೆ ವರ್ಷಗಳಿಂದ ಸಾಕಷ್ಟು ಜನರು ಮೂರ್ತೆದಾರರ ಸಹಕಾರ ಸಂಘದಲ್ಲಿ ಸದಸ್ಯರಾಗಿರುವವರು ಮರಕ್ಕೆ ಲೈಸೆನ್ಸ್ ಕೇಳಲು ಹೋದಾಗ ಲೀಟರ್ ಫೀ ಬಾಕಿಯಿಂದಾಗಿ ಅವರಿಗೆ ಲೈಸೆನ್ಸ್ ಕೊಡುವುದನ್ನು ನಿಲ್ಲಿಸುತ್ತಿದ್ದಾರೆ ಅದರ ಬಗ್ಗೆ ಆದಷ್ಟು ಬೇಗ ತೀರ್ಮಾನಿಸುವುದು ಒಳ್ಳೆಯದು

ಶ್ರೀ ಎಂ ಎಂ ನಾಣಯ್ಯ ಶ್ರೀ ಡಿ ವಿ ಸದಾನಂದಗೌಡರು ಹೇಳಿದ ಹಾಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂರಾರು ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದಿಲ್ಲ ಕೇವಲ 56 ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದಿವೆ ಲೀಟರ್ ಫೀ ವಸೂಲಾಗಿಲ್ಲ ಅದನ್ನು ವಸೂಲಿ ಮಾಡಬೇಕೆಂದು ಇಲಾಖೆಯಿಂದ ಮತ್ತು ಹಣಕಾಸು ಇಲಾಖೆಯಿಂದ ಒತ್ತಾಯ ಇತ್ತು ಮಾನ್ಯ ಸದಸ್ಯರು ಹೇಳಿದಂತೆ, ಮುಖ್ಯಮಂತ್ರಿಗಳು ಇದನ್ನು ವೇವ್-ಆಫ್ ಮಾಡುತ್ತೇವೆಂದು ಸದನದಲ್ಲಿ ಮತ್ತು ಸದನದ ಹೊರಗಡೆಯೂ ಹೇಳಿದ್ದಾರೆ ಅದರ ಬಗ್ಗೆ ಚಿಂತನೆ ನಡೆಸಿದಾಗ ಸದನದ ಗೌರವಾನ್ವಿತ ಸಮಿತಿಯಾದ ಅಶ್ಯೂರೆನ್ಸ್ ಸಮಿತಿ ಇದನ್ನು ವಜಾ ಮಾಡಲಿಕ್ಕಾಗುವುದಿಲ್ಲ ರಿಕವರಿ ಮಾಡಬೇಕೆಂದು ಹೇಳಿದ ಮೇರೆಗೆ ಹಣಕಾಸು ಇಲಾಖೆಯವರು ಮತ್ತು ಅಬಕಾರಿ ಇಲಾಖೆಯವರಿಗೆ ಹೇಳಿ ರಿಕವರಿ ಮಾಡಲು ಹೊರಟಿದ್ದೇವೆ ಆದರೂ ಕೂಡ, ಸರ್ಕಾರ ಬಹಳಷ್ಟು ಪರಿಶೀಲಿಸಿ ಇದನ್ನು ಯಾವ ರೀತಿ ವಜಾ ಮಾಡಬೇಕೆಂದು ಆಲೋಚನೆ ಮಾಡಿಕೊಂಡು ಬಂದಿದೆ ಇವತ್ತು

40 ಲಕ್ಷದ 70 ಸಾವಿರ ರೂಪಾಯಿಗಳ ಬಾಕಿ ಇದೆ 5 ಸಂಘಗಳು ಲೈಸೆನ್ಸ್ ನವೀಕರಣ ಮಾಡಿಕೊಂಡಿವೆ 2 ಸಂಘಗಳು ಮರು ಪಾವತಿ ಮಾಡಿವೆ 29 ಸಂಘಗಳು ಮರುಪಾವತಿ ಮಾಡಬೇಕಾಗುತ್ತದ ಇದರಲ್ಲಿ ಕಿರುಕುಳ ಕೊಡುವ ಪ್ರಶ್ನೆ ಒರುವುದಿಲ್ಲ ಯಾರು ಬಾಕಿದಾರರಾಗಿದ್ದಾರೆ, ಅವರ ಲೈಸೆನ್ಸ್ ನವೀಕರಣ ಮಾಡುವ ವಿದ್ಧತಿ ನಮ್ಮ ಇಲಾಖೆಯಲ್ಲಿಲ್ಲ ಆದರೂ ಕೂಡ ಇಲಾಖೆಯಿಂದ ಯಾವುದೇ ರೀತಿಯಲ್ಲಿ ತೊಂದರೆಯಾಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನಮ್ಮ ಸರ್ಕಾರ ವಹಿಸಿಕೊಳ್ಳುತ್ತದೆ ಇದರಲ್ಲಿ ಸಂಪೂರ್ಣವಾದ ಪರಿಹಾರವನ್ನು ಯಾವ ರೀತಿ ಕೊಡಬಹುದೆಂದು ಹೇಳಿ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತಿದೆ ಎಂದು ಹೇಳಲು ಇಚ್ಛಿಸುತ್ತೇನೆ

ಶ್ರೀ ಡಿ ವಿ ಸದಾನಂದಗೌಡ ನೀರಾ ಇಳಿಸಲು ಅನುಮತಿ ಕೊಟ್ಟಿದ್ದಾರೆ ಲೀಟರ್ ಫೀ ಮನ್ನಾ ಮಾಡಿಲ್ಲ

(ಗೊಂದಲ)

ಒಂದೇ ರಿಜಿಸ್ಟ್ರೇಷನ್‌ನಲ್ಲಿ ಹೆಚ್ಚು ಬಸ್ಸು ಓಡಿಸುತ್ತಿರುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 10(486)

ಸದಸ್ಯರ ಹೆಸರು ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ (ಕೋಲಾರ)

ಉತ್ತರಿಸುವ ಸಚಿವರು ಶ್ರೀ ಸಿ.ಆರ್ ಸಗೀರ್ ಅಹಮದ್ (ಸಾರಿಗೆ ಸಚಿವರು)

ಪ್ರಶ್ನೆ

ಅ) ಒಂದೇ ರಿಜಿಸ್ಟ್ರೇಷನ್ ಅಡಿಯಲ್ಲಿ ಒಂದಕ್ಕಿಂತ ಹೆಚ್ಚಿಗೆ ಬಸ್ಸುಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅಂತಹ ಯಾವ ಯಾವ ಬಸ್ಸುಗಳ ಮಾಲೀಕರ ವಿರುದ್ಧ ಎಷ್ಟು ಕೇಸುಗಳನ್ನು ದಾಖಲು ಮಾಡಿಕೊಳ್ಳಲಾಗಿದೆ?

ಉತ್ತರ

ಅ) ಬಂದಿದೆ